ಅ) ಅಂತಹ ಪ್ರಕರಣಗಳು ವರದಿಯಾದಾಗ ನಿಯಮಾನುಸಾರ ಆಪರ ಮೇಲೆ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಸರ್ಕಾರಿ ಪ್ರೌಢಶಾಲೆಯ ಚಿತ್ರಾಪುರ (ದ.ಕ) ಕಟ್ಟಡದ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 452 (926)

ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರೌಢಶಾಲೆ, ಚಿತ್ರಾಪುರ (ದ.ಕ) ಇದರ ಕಟ್ಟಡವನ್ನು ಸರ್ಕಾರವು ಕಾದಿರಿಸಿದ ಜಾಗದಲ್ಲಿ ಕಟ್ಟಲಾಗಿದೆಯೇ ಅಥವಾ ಖಾಸಗಿ ಜಾಗದಲ್ಲಿ ಕಟ್ಟಲಾಗಿದೆಯೇ?

ಆ) ಈ ಕುರಿತಾಗಿ ಶಾಲಾಭಿವೃದ್ಧಿ ಸಮಿತಿಯು ತೆಗೆದುಕೊಂಡ ತೀರ್ಮಾನಗಳೇನು?

ಇ) ಶಾಲಾ ಕಟ್ಟಡವನ್ನು ಖಾಸಗಿ ಸ್ಥಳದಲ್ಲಿ ಕಟ್ಟಿದ್ದಲ್ಲಿ ಆ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಪಣಂಬೂರು ಮೊಗವೀರ ಸಂಘಕ್ಕೆ ಸೇರಿದ ಜಾಗದಲ್ಲಿ ಕಟ್ಟಲಾಗಿದೆ.

ಆ) ಈ ಬಗ್ಗೆ ಶಾಲಾ ಅಭಿವೃದ್ಧಿ ಸಮಿತಿಯು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

ಇ) ಸದರಿ ಕಟ್ಟಡ ಕಟ್ಟಿರುವ ಸ್ಥಳವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು.

ವಿಷಯ:- ಮೂಡುಶೆಡ್ಡೆ ಸರಕಾರಿ ಕ್ಷಯರೋಗ ಆಸ್ಪತ್ರೆಯಲ್ಲಿ ಕ್ಷಕಿರಣ ಯಂತ್ರ ವ್ಯವಸ್ಥೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 453 (928)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೂಡುಶೆಡ್ಡೆ (ದ.ಕ)ದಲ್ಲಿರುವ ಸರಕಾರಿ ಕ್ಷಯರೋಗ ಆಸ್ಪತ್ರೆಯಲ್ಲಿ ಕ್ಷ-ಕಿರಣಯಂತ್ರದ ವ್ಯವಸ್ಥೆ ಎಷ್ಟು ವರ್ಷಗಳಿಂದ ಇಲ್ಲವಾಗಿದೆ, ಅದಕ್ಕೆ ಕಾರಣಗಳೇನು?

ಆ) ಈ ಕೊರತೆಯನ್ನು ನೀಗಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಮೂಡಶೆಡ್ಡೆ (ದ.ಕ) ಸರ್ಕಾರಿ ಕ್ಷಯರೋಗ ಆಸ್ಪತ್ರೆಯಲ್ಲಿ ಸುಮಾರು 5

ವರ್ಷಗಳಿಂದ ಕ್ಷ-ಕಿರಣ ಯಂತ್ರದ ವ್ಯವಸ್ಥೆ ಇರುವುದಿಲ್ಲ. ಈ ಯಂತ್ರವು ಬಹಳ ಹಳೆಯದಾಗಿದ್ದು ಇದಕ್ಕೆ ಬೇಕಾಗುವ ಬಿಡಿ ಭಾಗಗಳು ಮೂಲ ಸರಬರಾಜುದಾರರಿಂದಲೂ ಹಾಗೂ ಮಾರುಕಟ್ಟೆಯಲ್ಲಿ ಲಭ್ಯವಿಲ್ಲದ ಕಾರಣದಿಂದ ದುರಸ್ತಿ ಮಾಡಲು ಸಾಧ್ಯವಾಗಲಿಲ್ಲ.

ಆ) ಹೊಸ ಕ್ಷ-ಕಿರಣ ಯಂತ್ರವನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಮೂಡುಶೆಡ್ಡೆ (ಮಂಗಳೂರು ದ.ಕ) ಸರ್ಕಾರಿ ಕ್ಷಯ ರೋಗ ಆಸ್ಪತ್ರೆಗೆ ನೂತನ ಕಟ್ಟಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 454 (927)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡುಶೆಡ್ಡೆ (ಮಂಗಳೂರು ದಕ್ಷಿಣ ಕನ್ನಡ) ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡವು ನಿರ್ಮಾಣಗೊಂಡಿದ್ದರೂ ಇನ್ನೂ ಕಾರ್ಯಾರಂಭವಾಗದೇ ಇರಲು ಕಾರಣಗಳೇನು, ಹಾಗೂ ಎಂದು ಕಾರ್ಯಾರಂಭವಾಗುವುದು.

ಆ) ಸದರಿ ಆಸ್ಪತ್ರೆಯ ಕಟ್ಟಡಕ್ಕೆ ತಗುಲಿದ ಒಟ್ಟು ವೆಚ್ಚವೆಷ್ಟು, ಅದನ್ನು ಆಸ್ಪತ್ರೆಯ ಉದ್ದೇಶಕ್ಕಾಗಿ ಸ್ವಾಧೀನಕ್ಕೆ ಇನ್ನೂ ತೆಗೆದುಕೊಳ್ಳದೇ ಇರುವುದರಿಂದಾಗಿ ಉಂಟಾಗಿರುವ ಅನಾನುಕೂಲತೆ ಹಾಗೂ ನಷ್ಟ ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ (ಮಾನ್ಯ ಆರೋಗ್ಯ ಸಚಿವರು):-

ಅ) ಮೂಡುಶೆಡ್ಡೆ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡವು ಇನ್ನೂ ಪೂರ್ಣಗೊಂಡಿಲ್ಲ. ಕಟ್ಟಡವು ಎಲ್ಲಾ ರೀತಿಯಲ್ಲಿ ಪೂರ್ಣಗೊಂಡ ನಂತರ ಮತ್ತು ಅದಕ್ಕೆ ಸಂಬಂದಿಸಿದಂತೆ ಸಿಬ್ಬಂದಿಗೆ ಮಂಜೂರಾತಿ ನೀಡಿದ ನಂತರ ಕಾರ್ಯಾರಂಭವಾಗುವುದು.

ಆ) ಸದರಿ ಆಸ್ಪತ್ರೆಯ ಕಟ್ಟಡಕ್ಕೆ ಇಲ್ಲಿಯವರೆಗೆ ತಗುಲಿರುವ ವೆಚ್ಚ ರೂ. 29, 15, 986.00 ಕಟ್ಟಡವು ಎಲ್ಲಾ ರೀತಿಯಲ್ಲೂ ಪೂರ್ಣಗೊಳ್ಳದೇ ಇರುವುದರಿಂದ ಆಸ್ಪತ್ರೆಯನ್ನು ಸ್ವಾಧೀನಕ್ಕಾಗಿ ತೆಗೆದುಕೊಂಡಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಇತ್ತೀಚಿಗೆ ಶಾಶ್ವತ ಅನುದಾನರಹಿತ ಪ್ರೌಢಶಾಲೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :455 (251)

ಡಾ.ಎಂ.ಬಿ.ಕರ್ಕಿ (ಕುಮಟಾ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?